Doc-189
T-P-2

Reg No. B G 155 8-8-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳವಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ನ್ಯೂಜಿಲಾಂಡಿಗೆ ಭಾರತ ಡಾಕ್ಟರುಗಳು ಬೇಕಿಲ್ಲ

### ಕೆನಡಾ ಸಾಲ

ನವದೆಹಲಿ— ಅತ್ಯವಶ್ಯ ವಸ್ತುಗಳು ಮತ್ತು ರಸಾಯನಿಕ ಗೊಬ್ಬರವನ್ನು ಆಮದು ಮಾಡಿಕೊಳ್ಳಲು ಭಾರತಕ್ಕೆ ಕೆನಡಾ ರೂ 18.9 ಕೋಟಿ ಬಡ್ಡಿಯಿಲ್ಲದ ಎರಡು ಸಾಲಾ ಕೊಡುವದು.

★

### ರಾಜಿ ಒಪ್ಪಂದ

ಶೃಂಗೇರಿ— ಇಲ್ಲಿಯ ಬೆಟ್ಟಮಲ್ಲಿಕಾರ್ಜುನ ದೇವಸ್ಥಾನ ಪ್ರದೇಶದ ಹಕ್ಕಿನ ಬಗ್ಗೆ ಪುರಸಭೆಗೂ ಶ್ರೀಮಠಕ್ಕೂ ವಿವಾದ ವಿದ್ದು ಆದನ್ನು ರಾಜೀ ಒಪ್ಪಂದದ ಮೂಲಕ ಪರಿಹರಿಸಿಕೊಳ್ಳಬೇಕೆಂದು ಪುರಸಭೆ ನಿರ್ಧರಿಸಿದೆ.

★

### ವಿಗ್ರಹಗಳ ಪತ್ತೆ

ಮೈಸೂರು—ಎಂ ವಿ ಮೊದಲಿಯಾರ್ ಎಂಬುವರ ಮನೆಯನ್ನು ನಿನ್ನೆ ಪೋಲೀಸರು ಶೋಧಿಸಿದಾಗ, ಅಲ್ಲಿ ಮೈಸೂರು ಮೊಲಾದ ಕಡೆಯ ಮಠ ದೇವಸ್ಥಾನಗಳಿಂದ ಅಪಹರಿಸಿ ತಂದಿದ್ದ ನೂರಕ್ಕೂ ಹೆಚ್ಚು ವಿಗ್ರಹಗಳು ಸಿಕ್ಕಿದವೆಂದೂ ಮುಂದಿನ ತನಿಖೆ ನಡೆಯುತ್ತಿದೆಯೆಂದೂ ಗೊತ್ತಾಗಿದೆ.

### ಪುರಸಭೆ

ಮೈಸೂರು— ನಿನ್ನೆ ಪುರಸಭಾಧ್ಯಕ್ಷ ಶ್ರೀ ಎಂ ಎ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಅಧಿವೇಶನದಲ್ಲಿ ನಜರಬಾದು ಬ್ಯಾಂಡ್ ಹಾಸ್‌ಪುರ್ಡ್ ಪ್ರದೇಶ ಬಗ್ಗೆ ಮತ್ತು ಕೊಳಚೆ ಪ್ರದೇಶದಲ್ಲಿ ಕಟ್ಟಲಾಗಿರುವ ಮನೆಗಳ ಬಗ್ಗೆ ಕೈಗೊಂಡ ನಿರ್ಧಾರವನ್ನು ಪ್ರತಿಭಟಿಸಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾಪರಿತ್ಯಾಗ ಮಾಡಿದರು.

★

### ಕಳ್ಳ ಭಟ್ಟಿ

ಮೈಸೂರು— ಮಂಡಿ ಮೊಹಲ್ಲಾದಲ್ಲಿ ಪೋಲಿಸರು ಎರಡು ಮನೆಗಳ ಮೇಲೆ ಧಾಳಿ ನಡೆಸಿ 5700 ಲೀಟರು ಕೊಳೆಯನ್ನೂ ಇತರ ಸಲಕರಣೆಗಳನ್ನೂ ವಶಪಡಿಸಿಕೊಂಡು ನಾಲ್ಕು ಮಂದಿಯನ್ನು ಬಂಧಿಸಿದರು.

★

### ಲಾರಿ ಚಾಲಕನಿಗೆ ಶಿಕ್ಷೆ

ನಂಜನಗೂಡು— ಕೇರಳಕ್ಕೆ ಅಕ್ರಮವಾಗಿ 45 ಮೂಟೆ ಅಕ್ಕಿಸುತ್ತಿದ ವಾಸು ಎಂಬ ಲಾರಿ ಡ್ರೈವರಿಗೆ ಮುನ್ಸಿಫ್ ನ್ಯಾಯಾಧೀಶರು ರೂ. 1000 ಜುಲ್ಮಾನೆ ವಿಧಿಸಿದರು.

### ಪೂರ್ಣ ನಂಬಿಕೆ

ನವದೆಹಲಿ— ರಾಷ್ಟ್ರಾಧ್ಯಕ್ಷತೆಯ ಉಮೇದುವಾರರ ಆಯ್ಕೆ ಬಗ್ಗೆ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ನಿರ್ಧಾರಕ್ಕೆ ತಮ್ಮ ಬೆಂಬಲವಿದೆಯೆಂದು ಪಾರ್ಲಿಮೆಂಟರಿ ಪಾರ್ಟಿ ವಿಾಟಿಂಗಿನಲ್ಲಿ ಪ್ರಧಾನಿ ಇಂದಿರಾರವರು ಹೇಳಿದರು – ನಾವು ಕಾಂಗ್ರೆಸ್ ಅಧ್ಯಕ್ಷರನು ಸಂಪೂರ್ಣ ನಂಬುತ್ತೇವೆ ಎಂದು ಹೇಳಿದರು – ವಿಾಟಿಂಗಿಗೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರನ್ನು ವಿಶೇಷವಾಗಿ ಆಹ್ವಾನಿಸಲಾಗಿತ್ತು.

★

### ಕಳ್ಳಭಟ್ಟಿ

ಮೈಸೂರು—ಜಿಲ್ಲೆಯ ಎಲ್ಲಾ ಗ್ರಾಮಗಳಿಗೂ ರೇಡಿಯೋ ಸೆಟ್ ಹಂಚಲಾಗುವದೆಂದೂ ಈಗಾಗಲೇ 390 ಸೆಟ್ ಹಂಚಲಾಗಿದೆಯೆಂದೂ ಪ್ರಕಟವಾಗಿದೆ.

★

### ಅಗ್ನಿ ಅನಾಹುತ

ನವದೆಹಲಿ— ಬ್ಯಾಂಕಾಕಿದಲ್ಲಿನ ಏಷ್ಯಾ ಎಕನಾಮಿಕ್ ಕಮಿಷನ್ ಕಟ್ಟಡದ ಪ್ರಮುಖ ಸಮ್ಮೇಳನ ಸಭಾಂಗಣವು ಅಗ್ನಿಗೆ ಆಹುತಿಯಾಯಿತು – ವಿದ್ಯುತ್ ತಪ್ಪಿನಿಂದ ಆದುದೆನ್ನಲಾಗಿದೆ - ನಷ್ಟ 50 ಮಿಲಿಯ ಡಾಲರುಗಳು.

★

### ಸರ್ಕಾರಿ ಆಜ್ಞೆ ರದ್ದು

ಕೊಚ್ಚಿ— ಕಳೆದ ಸೆಪ್ಟಂಬರಿನಲ್ಲಿ ನಡೆದ ಮುಷ್ಕರದಲ್ಲಿ ಭಾಗವಹಿಸಿದ ಕೇಂದ್ರ ನೌಕರರ ಮೇಲೆ ಹೂಡಲಾಗಿದ್ದ ಮೊಖದ್ದಮೆ ವಾಪಸ್ಸು ತೆಗೆದುಕೊಂಡ ಕೇರಳ ಸರ್ಕಾರಿ ಆಜ್ಞೆಯನ್ನು ಹೈ ಕೋರ್ಟು ರದ್ದುಪಡಿಸಿ, ಆಪಾದಿತರ ಪುನರ್ವಿಚಾರಣೆಯನ್ನು ನಡೆಸಲು ಆಜ್ಞೆ ಮಾಡಿದೆ.

### ಸರಕಾರ ಸಾಲ ಎತ್ತುವುದು

ಬೆಂಗಳೂರು— ರಾಜ್ಯ ಸರಕಾರವು ಮುಂತ್ತೊಂದು ಬಹಿರಂಗ ಮಾರುಕಟ್ಟೆ ಸಾಲ ಎತ್ತಲಿದೆ – ವಿವರ ಈ ತಿಂಗಳ ಮಧ್ಯದಲ್ಲಿ ಪ್ರಕಟಿಸಲಾಗುವುದು.

### ರಥ ಸುಟ್ಟದ್ದಕ್ಕೆ ಕಾರಣ

ಚಂಗಲ್ಪಟ್— ಮಧುರಾಂತಕಂನಲ್ಲಿಯ ದೇವಾಲಯದ 90 ವರ್ಷ ರಥವನು ಸುಟ್ಟ ಧನಪಾಲ್ ಎಂಬುವನಿಗೆ 2 ವರ್ಷ ಕಠಿಣ ವಿಧಿಸಲಾಯಿತು – ಅವನು ತನ್ನ ತಪ್ಪೊಪ್ಪಿಕೊಂಡನು - ಸಾಲಾ ತೀರಿಸಲು ರೂ. 20 ಸಾವಿರವನ್ನು ಅಲ್ಲಿಯ ರಾಮು ದೇವರು ಸಹಾಯ ಮಾಡಲಿಲ್ಲವಾಗಿ ದೇವರಲ್ಲಿ ನಂಬಿಕೆ ಹೋಗಿ ತಾನು ರಥ ಸುಟ್ಟೆ ದೆಂದನು.

### ಜಾತಿ ಮತ ಭೇದವಿಲ್ಲದ ದೇವಸ್ಥಾನ

ತೇಜಪುರ— ಮುಜೂಣಿಯ ಪ್ರದೇಶದಲ್ಲಿ ಯೋಧರು ನಿರ್ಮಿಸಿರುವ ದೇವಾಲಯದಲ್ಲಿ ಜಾತಿಮತಗಳ ಭೇದಗಳಿಲ್ಲದೆ, ಸರ್ವ ಧರ್ಮಗಳ ಸೇರಿರುವವರೂ ಪೂಜೆ ಪ್ರಾರ್ಥನೆ ನಡೆಸಬಹುದು. ಇದರಲ್ಲಿ ಶ್ರೀ ಕೃಷ್ಣನ ವಿಗ್ರಹ ಪ್ರತಿಷ್ಟಿಸಲಾಗಿದೆ; ಶಿವ, ಕ್ರಿಸ್ತ, ಬುದ್ಧ, ಗುರು ನಾನಕ್, ಮಕ್ಕಾ ನಗರದ ತೈಲಚಿತ್ರಗಳನ್ನಿಡಲಾಗಿದೆ – ದ್ವಾರದಲ್ಲಿ ಗಣೇಶ ಮತ್ತು ಹನುಮಂತನ ವಿಗ್ರಹಗಳಿವೆ.

### ಭಾರತದ ಡಾಕ್ಟರುಗಳು ಬೇಡ

ಟ್ರಾಕ್ಲಾಂಡ್ ( ನ್ಯೂಜಿಲ್ಯಾಂಡ್ )— ನ್ಯೂಜಿಲ್ಯಾಂಡು ಆಸ್ಪತ್ರೆಗಳು ಭಾರತದ ಡಾಕ್ಟರುಗಳನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಿವೆ.

### ಹೈಕೋರ್ಟುಗಳ ಭಾಷೆ

ನವದೆಹಲಿ— ಹೈ ಕೋರ್ಟುಗಳಲ್ಲಿನ ಭಾಷೆಗಳ ಬಗ್ಗೆ ಎಲ್ಲಾ ರಾಜ್ಯಗಳ ಅಭಿಪ್ರಾಯ ತಿಳಿದುಕೊಂಡು, ನಂತರ ಕಟ್ಟಕಡೆ ನಿರ್ಧಾರ ತೆಗೆದುಕೊಳ್ಳಲಾಗುವದೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಬೀರೂರು— ಬಂಧನದಲ್ಲಿದ್ದ ಬಳಗಾರ ನಂಜುಂಡಪ್ಪನ ಮೇಲೆ ಪೋಲೀಸರು ಚಿತ್ರ ಹಿಂಸೆ ನಡೆಸಿದನೆಂದು ಪ್ರತಿಭಟಿಸಿ ಸಾವಿರಾರು ಜನ ಪ್ರದರ್ಶನ ನಡೆಸಿದರು.

ತಾ. 8–8–69 ನೇ ಶುಕ್ರವಾರದಿಂದ ಅಮೋಘ
... ದಿನ 3 ಪ್ರದರ್ಶನಗಳು .... ಪ್ರಾರಂಭ
ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ
ದಿನ: 2–30, 6 ಮತ್ತು 9–30 ಕ್ಕೆ ದಿನ : 3, 6–30, 10 ಕ್ಕೆ
ವೀನಸ್ ಬ್ರದರ್ಸ್‌ರವರ ಸಾಧಿ ( ಕಲರ್‌ನಲ್ಲಿ )
ಪಾತ್ರ– ರಾಜೇಂದ್ರಕುಮಾರ್, ವೈಜಯಂತಿಮಾಲಾ, ಸಿಮ್ಮಿ, ಸಂಜೀವ್‌ಕುಮಾರ್
ಸಂಗೀತ : ನೌಷದ್ ನಿರ್ದೇಶನ : ಶ್ರೀಧರ್
ತಾ || 15–8–69 ರಿಂದ — — — ಶ್ರೀ ಟಾಕೀಸಿನಲ್ಲಿ
SHAGIRD [New Print)

# ಕೈಮುಗಿದ ಕರುಣಾಳು

[ ಪೂರ್ಣ ದೃಷ್ಟಿಗೆ ಬುದ್ಧ, ಬಸವ ಹಾಗೂ ಬಾಪೂಜಿ ಒಂದೇ ' ಸತ್ ' ನ ಸೂರು ಮುಖಗಳು, ಋತಚಿದ್ವಿನ್ಯಾಸ ಭಗವದ್ ಲೀಲಾವಿಭೂತಿಯ ಅ ವಿ ನಾ ಶ ತ:ಗಳು. ಆದರ ಸಮ್ಯಕ್ ದರ್ಶನವೇ – ' ಕೈಮುಗಿದ ಕರುಣಾಳು "– ಲೀ ]

ನಿನ್ನೆದೆಯ ನಂದನಕೆ ಗುಂಡಿಟ್ಟ ಪಾತಕಿಗೂ
ಕೈಮುಗಿದ ಕರುಣಾಳು ನಿನಗೆ ಸ್ಮರಣಿವೆ !
ನಮ್ಮೆದೆಯ ನಂಜೀಂಟಿ ನಿಲಕಂಠನೆ ಆಗಿ
ಲೋಕ ಸಂರಕ್ಷಿಸಿದ ನಿನ್ನ ನೆನೆವೆ ॥

ವರುಷ ಶತ–ಶತಕಕೂ ಹಿಂದೊಮ್ಮೆ ನೀನಂದು
' ಬುದ್ಧ " ನೆಂದಭಿಧಾನ ತಳೆದು ಬಂದೆ !
ನಮ್ಮೊಡನೆ ನಡ್ದೆ ನಡೆದು ಶ್ಯಾಂತಿ–ಸಹನೆಯ ನುಡಿದು
ಲೋಕ ಜೀವನಕೆಂದು ನೆಮ್ಮದಿಯ ತಂದೆ ॥

ಸಿದ್ಧ–ಬುದ್ಧನೆ ನೀನು ಬಸವದೇವನೆ ಆಗಿ
ಬಾಂದಳದ ಬೆಳಕಾಗಿ ಬುವಿಗೆ ಇಳಿದೆ !
ಜಾತಿ–ಮತ, ಕುಲ–ಧರ್ಮ ಕುರುಡುಕಟ್ಟಳೆ ಕಳೆದು
ಮನುಜಲೋಕಕೆ ಮುಕ್ತಿ–ಮಾರ್ಗ ತೆರೆದೆ ॥

ಬುದ್ಧ–ಬಸವನೆ ನೀನು ಮತ್ತೊಮ್ಮೆ ಮೈದಳೆದು
ಬಾಪೂಜಿ ರೂಪದಲಿ ಅವತರಿಸಿ ಇಂದು !
ಬೆಳಸಿ ನಮ್ಮಯ ಬದುಕ, ; ಕಳೆದೆ ವಿಶ್ವದ ತಪಕ
ಉಳಿಯೆ ಅರಿಯದೆ ಸೃಷ್ಟಿ ಇಂದು ಮುಂದು ॥

[ ಕನ್ನಡ ನುಡಿ ] — ಕೆ. ಆರ್. ಗಣೇಶರಾವ್.

# Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja Mysore and other personages have extended messages of felicitations and good wishes. Sri Sringeri and Sri Dwarak Jagadgurujis have favoured: blessings and financial aid.

Rajasabha-bhushana Sri F. K. Irani, Sri M. B. Basaviah. Sri Madhav Shenoi. Sri Opera Talkies. Padmabhushana Dr. M.C. Modi, Dr. R. S. Nanjunda Swamy (Glasgow). Sri Ananthanarasimha Iyengar (Honganur) have generously exten.J-ed donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.


# SHAKTI SUDHA

A Superb Tonic



ವುಡ್‌ಲಾಂಡ್ಸ್ ಜಯಪ್ರದ 2 ನೇ ವಾರ
ಅಮೋಘ ಆರಂಭ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮಾನ್, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ ದಿನ 3 ಪ್ರದರ್ಶನಗಳು ]

ಒಪೆರಾ— ಅಮೋಘ 4ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಿಗಳು



Quality Printing — Neat Binding

**Lakshminarasimha Press**

Sivarampet, Mysore


# Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿ ಬೆಳೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

**Protect the Cow**


Edited, Printed & Published by Dharmaprachara Nirata M S Krishna Rao ( Proprietor ) at the Satyavadi Press Chamarajapuram, Mysore 4